**ಕರ್ನಾಟಕ ವಿಧಾನ ಪರಿಷತ್ತು**

**01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 87**

**02. ಸದಸ್ಯರ ಹೆಸರು : ಶ್ರೀ ಪಿ.ಆರ್. ರಮೇಶ್**
**(ನಾಮನಿರ್ದೇಶನ ಹೊಂದಿದವರು)**

**03. ಉತ್ತರಿಸುವ ದಿನಾಂಕ : 13.02.2023**

**04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು**

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಉಗ್ರ ಚಟುವಟಿಕೆಗಳು, ಮತೀಯ ಗಲಭೆಗಳು, ಕೊಲೆ/ ಸುಲಿಗೆ/ ದರೋಡೆ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಪ್ರಕರಣಗಳನ್ನು ನಿಯಂತ್ರಿಸಲು ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು;</td><td>
ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಉಗ್ರ ಚಟುವಟಿಕೆಗಳು, ಮತೀಯ ಗಲಭೆಗಳಿಗೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳ ವರ್ಷವಾರು ಮಾಹಿತಿ ಈ ಕೆಳಗಿನಂತಿದೆ.
<table>
<tr><th>ಕ್ರಸ</th><th>ವರ್ಷ</th><th>ಉಗ್ರ ಚಟುವಟಿಕೆಗಳ ಪ್ರಕರಣ ಸಂಖ್ಯೆ</th><th>ಮತೀಯ ಗಲಭೆ ಪ್ರಕರಣಗಳ ಸಂಖ್ಯೆ</th><th>ಕೊಲೆ ಪ್ರಕರಣಗಳ ಸಂಖ್ಯೆ</th><th>ಸುಲಿಗೆ ಪ್ರಕರಣಗಳ ಸಂಖ್ಯೆ</th><th>ದರೋಡೆ ಪ್ರಕರಣಗಳ ಸಂಖ್ಯೆ</th></tr>
<tr><td>1</td><td>2021</td><td>0</td><td>26</td><td>1350</td><td>981</td><td>179</td></tr>
<tr><td>2</td><td>2022</td><td>6</td><td>73</td><td>1376</td><td>1075</td><td>221</td></tr>
<tr><td>3</td><td>2023</td><td>0</td><td>0</td><td>104</td><td>98</td><td>12</td></tr>
<tr><td colspan="2">ಒಟ್ಟು</td><td>6</td><td>99</td><td>2830</td><td>2154</td><td>412</td></tr>
</table>
ರಾಜ್ಯದಲ್ಲಿ ಉಗ್ರಚಟುವಟಿಕೆ, ಮತೀಯ ಗಲಭೆ, ಕೊಲೆ/ಸುಲಿಗೆ, ದರೋಡೆಯಂತಹ ಅಪರಾಧಗಳನ್ನು ತಡೆಯಲು ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಪೊಲೀಸ್ ಇಲಾಖಾ ವತಿಯಿಂದ ಯಾವಾಗಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡಲಾಗುತ್ತಿದ್ದು, ಈ ಕೆಳಗಿನಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.<br>
➢ ಕೋಮು ಗಲಭೆಗಳು ನಡೆಯದಂತೆ ಕೋಮು ಅತಿ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಿ ಅಂತಹ ಪ್ರದೇಶಗಳಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿರುತ್ತದೆ.<br>
➢ ಕೋಮು ಸೌಹರ್ದತೆಗೆ ಧಕ್ಕೆ ತರುವಂತಹ ಬಾಕಿ ಇರುವ ವಿವಾದಗಳನ್ನು ಗುರುತಿಸಿ ಅವುಗಳನ್ನು ಬಗೆಹರಿಸಲು ಜಿಲ್ಲಾಡಳಿತ ವತಿಯಿಂದ ಅಗತ್ಯ ಕ್ರಮ ವಹಿಸಲಾಗುತ್ತಿರುತ್ತದೆ.<br>
➢ ಕೋಮು ಅತಿ ಸೂಕ್ಷ್ಮ ಪ್ರದೇಶಗಳಲ್ಲಿ ಅನ್ಯ ಕೋಮಿನ ಜನರು ಯಾವುದಾದರೂ ಮೆರವಣಿಗೆ ಹಾಗೂ ಇನ್ನಿತರೆ ಕಾರ್ಯಕ್ರಮಗಳನ್ನು ನಡೆಸುವ ವೇಳೆ ಕೋಮು ಭಾವನೆಗಳಿಗೆ ಧಕ್ಕೆಯಾಗದಂತೆ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.<br>
➢ ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲ ಮಿಟಿಂಗ್, ನಾಗರೀಕ ಸಮಿತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.<br>
➢ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದೆ.<br>
➢ ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಬೀಟ್ ಮತ್ತು ಶುಭೋದಯ (ಗುಡ್ ಮಾರ್ನಿಂಗ್) ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗಿದೆ.
</td></tr>
</table>

- ಅಂತರ್‌ರಾಜ್ಯ ಸಂಪರ್ಕಿಸುವ ಗಡಿಯಲ್ಲಿ ಚೆಕ್ ಪೋಸ್ಟ್‌ಗಳನ್ನು ಪ್ರಾರಂಭಿಸಿದ್ದು, ವಾಹನಗಳನ್ನು, ಸಂಶಯಿತ ವ್ಯಕ್ತಿಗಳನ್ನು ಹಾಗೂ ಯಾರು ಶಸ್ತ್ರಾಸ್ತ್ರಗಳನ್ನು ಸಾಗಿಸುವರೊ ಅಂತಹ ವ್ಯಕ್ತಿಗಳನ್ನು ತಪಾಸಣೆ ಮಾಡಲಾಗುತ್ತಿದೆ.
- ಠಾಣಾ ಗುಪ್ತವಾರ್ತಾ ಸಿಬ್ಬಂದಿಯವರಿಗೆ ಮತ್ತು ಬೀಟ್ ಸಿಬ್ಬಂದಿಯವರಿಗೆ ಸೂಕ್ತ ಸಲಹೆ ಸೂಚನೆಗಳನ್ನು ನೀಡುತ್ತಿದ್ದು, ಇವರಿಂದ ಸೂಕ್ತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.
- ಸರಹದ್ದಿನಲ್ಲಿ ನಡೆಯುವ ಎಲ್ಲಾ ಬಂದೋಬಸ್ತುಗಳಿಗೆ ಗರಿಷ್ಠ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.
- ಸುಧಾರಿತ ಗಸ್ತು ಪದ್ಧತಿಯನ್ನು ಜ್ಯಾರಿಗೊಳಿಸಿ ಕ್ರಮ ತೆಗೆದುಕೊಳ್ಳಲಾಗಿದೆ.
- ಹಗಲು ಮತ್ತು ರಾತ್ರಿ ಗ್ರಾಮ ಗಸ್ತು ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ.
- ಕೋಮು ಗಲಭೆ ಹಿನ್ನಲೆಯುಲ್ಲಿ ವ್ಯಕ್ತಿಗಳ ಚಲನವಲನಗಳನ್ನು ಗಮನಿಸಲಾಗುತ್ತಿದೆ.
- ರೌಡಿಗಳು ಮತ್ತು ಮತಿಯ ಗೂಂಡಾಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದ್ದು ಅವರ ಚಟುವಟಿಕೆಯ ಮೇಲೆ ಸೂಕ್ತ ನಿಗಾ ಇರಿಸಲಾಗಿದೆ.
- ಠಾಣಾ ವ್ಯಾಪ್ತಿಯಲ್ಲಿ ಸಕ್ರಿಯವಾಗಿರುವ ರೌಡಿ ಆಸಾಮಿಗಳ ಮತ್ತು ಮತೀಯ ಗೂಂಡಾಗಳ ಚಲನವಲನಗಳನ್ನು ಹಾಗೂ ಅವರ ಚಟುವಟಿಕೆಯ ಕುರಿತು ಮಾಹಿತಿ ಸಂಗ್ರಹಿಸಿ ಅವರ ವಿರುದ್ಧ ಸಿಆರ್‌ಪಿಸಿ ಪ್ರಕಾರ ಪ್ರಕರಣ ದಾಖಲಿಸಿ ಬಾಂಡ್ ಮುಚ್ಚಳಿಕೆ ಪಡೆಯಲಾಗುತ್ತಿದೆ.
- ದೈಹಿಕ ಹಲ್ಲೆ ನಡೆಸಿದ, ತನಿಖೆ ಅಥವಾ ನ್ಯಾಯಾಲಯದ ವಿಚಾರಣೆಯಲ್ಲಿರುವ ಪ್ರಕರಣಗಳಲ್ಲಿ ಭಾಗಿಯಾದ ರೌಡಿ ಆಸಾಮಿಗಳ ಮತ್ತು ಮತೀಯ ಗೂಂಡಾಗಳು ಪುನ: ದೈಹಿಕ ಹಲ್ಲೆ ಪ್ರಕರಣದಲ್ಲಿ ಭಾಗಿಯಾದರೆ ಸದರಿ ಆರೋಪಿಗಳು ಈಗಾಗಲೇ ನ್ಯಾಯಾಲಯದಿಂದ ಪಡೆದಿರುವ ಜಾಮೀನು ರದ್ದು ಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
- ಕರ್ನಾಟಕ ಪೊಲೀಸ್ ಕಾಯ್ದೆ ಅನ್ವಯ ಗಡಿಪಾರು ಮಾಡಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ.
- ಉಗ್ರ ಚಟುವಟಿಕೆಗಳನ್ನು ತಡೆಗಟ್ಟಲು ಹೆಚ್ಚಿನ ಜನಸಂದಣಿ ಪ್ರದೇಶಗಳು, ಪ್ರಮುಖ ಸ್ಥಾವರಗಳು ಹಾಗೂ ಜಿಲ್ಲೆಯ ಪ್ರಮುಖ ಸ್ಥಳಗಳ ಭದ್ರತೆಗೆ ಸಂಬಂಧಿಸಿದಂತೆ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.
- ಉಗ್ರ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.
- ಸಮರ್ಪಕ ದಾಖಲಾತಿ ಇಲ್ಲದೇ, ಪೂರ್ವಾಪರಗಳನ್ನು ವಿಚಾರಿಸದೇ ಯಾವುದೇ ವ್ಯಕ್ತಿಗಳಿಗೆ ಮನೆ ಬಾಡಿಗೆ ನೀಡದಂತೆ, ಸಮರ್ಪಕ ದಾಖಲಾತಿಗಳನ್ನು ಪರಿಶೀಲಿಸದೇ ಲಾಡ್ಜ್, ಗೆಸ್ಟ್ ಹೌಸ್, ಹೋಂ ಸ್ಟೇ, ರೂಮ್‌ಗಳನ್ನು ನೀಡದಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗಿದೆ.
- ಠಾಣಾ ಮಟ್ಟದಲ್ಲಿ ಬೀಟ್ ಸಮಿತಿಯ ಸದಸ್ಯರ ಸಭೆ ನಡೆಸಿ, ಉಗ್ರ ಚಟುವಟಿಕೆಗಳನ್ನು ತಡೆಗಟ್ಟಲು ಹಾಗೂ ಅಂತಹ ಚಟುವಟಿಕೆಗಳಿಗೆ ಬೆಂಬಲ ನೀಡುವವರ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿ, ಮಾಹಿತಿ ಸಂಗ್ರಹಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಸಾಮಾಜಿಕ ಜಾಲತಾಣಗಳ ಬಗ್ಗೆ ಸೂಕ್ತ ನಿಗಾ ಇರಿಸಿ ಉಗ್ರ ಚಟುವಟಿಕೆಗಳಿಗೆ ಬೆಂಬಲಿಸಿ ಪೋಸ್ಟ್ ಹಾಕುವ ಹಾಗೂ ಕಮೆಂಟ್ ಮಾಡುವ ವ್ಯಕ್ತಿಗಳ ಬಗ್ಗೆ ನಿಗಾ ಇರಿಸಲಾಗುತ್ತಿದೆ.

| | | |
|---|---|---|
| | | ➢ ಸರಿಯಾದ ಗುಪ್ತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಈ ಕುರಿತು ಸೂಕ್ತ ನಿಗಾವಹಿಸಲಾಗುತ್ತಿದೆ.<br>➢ ರಾಜ್ಯದಲ್ಲಿ ಅಪರಾಧಗಳನ್ನು ತಡೆಗಟ್ಟಲು ಹೊಸ ಬೀಟ್ ಪದ್ಧತಿಯನ್ನು ಜಾರಿಗೆ ತರಲಾಗಿರುತ್ತದೆ.<br>➢ ಈ ಹೊಸ ಬೀಟ್ ಪದ್ಧತಿಯಲ್ಲಿ ಪ್ರತಿ ಪೊಲೀಸ್ ಠಾಣಾ ಸರಹದ್ದುಗಳ ಬೀಟ್ ಮತ್ತು ಉಪ-ಬೀಟ್‌ಗಳ ಪ್ರಮುಖ ಸ್ಥಳಗಳಲ್ಲಿ ಸಾರ್ವಜನಿಕ ಸಂಪರ್ಕ ಸಭೆಗಳನ್ನು ನಡೆಸಿ ಅಪರಾಧ ತಡೆಗಟ್ಟಲು ಎಚ್ಚರ ವಹಿಸುವ ಬಗ್ಗೆ ಸೂಕ್ತ ನಿರ್ದೇಶನ ನೀಡಲಾಗಿದೆ.<br>➢ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸಂಚಾರ ನಿರ್ವಹಣೆ ಮತ್ತು ಅಪರಾಧ ಹಿನ್ನೆಲೆಯಿರುವ ಆಸಾಮಿಗಳ ಮೇಲೆ ನಿಗಾವಹಿಸುವ ಸಲುವಾಗಿ ಸರ್ಕಾರದ ವತಿಯಿಂದ ಪ್ರಮುಖ ಸ್ಥಳಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮರಾಗಳನ್ನು ಅಳವಡಿಸಿ ಕಣ್ಗಾವಲು ಇರಿಸಲಾಗುತ್ತಿದೆ. ಅಂಗಡಿಗಳು, ಮಾಲುಗಳು ಮತ್ತು ಪ್ರಮುಖ ವ್ಯಾಪಾರ ಕಟ್ಟಡಗಳ ಮಾಲೀಕರುಗಳು, ಪಬ್ಲಿಕ್ ಸೇಫ್ಟಿ ಕಾಯ್ದೆ ರೀತ್ಯಾ ಸಿ.ಸಿ.ಟಿ.ವಿ. ಅಳವಡಿಸಿಕೊಳ್ಳಲು ಸೂಚನೆ ನೀಡಲಾಗಿದೆ.<br>➢ ಸರಗಳ್ಳತನ ಮಾಡುವ ಎಮ್.ಓ.ಬಿ ಗಳ ಪರಿಶೀಲನೆ ತೀವ್ರಗೊಳಿಸಲಾಗಿದೆ. ಸರಗಳ್ಳತನ ನಡೆಯುವ ಅವಧಿ ಮತ್ತು ಪ್ರದೇಶಗಳನ್ನು ಗುರುತಿಸಿ ವಿಶೇಷ ಗಸ್ತು ಹಾಗೂ ನಾಕಾಬಂಧಿ ಏರ್ಪಡಿಸಲಾಗುತ್ತಿದೆ.<br>➢ ಎಂ.ಓ.ಬಿ. ಆಸಾಮಿಗಳು, ಪೂರ್ವಸಜಾ ಆಸಾಮಿಗಳು, ರೌಡಿ ಆಸಾಮಿಗಳನ್ನು ಆಗಿಂದಾಗ್ಗೆ ಪರಿಶೀಲನೆ ಮಾಡಿ ಈ ಆಸಾಮಿಗಳ ವಿರುದ್ಧ ಕಲಂ 107, 109, 110 ಸಿಆರ್‌ಪಿಸಿ ರೀತ್ಯಾ ಭದ್ರತಾ ಕಾಯ್ದೆಗಳ ಅಡಿಯಲ್ಲಿ ಪ್ರಕರಣ ದಾಖಲು ಮಾಡಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.<br>➢ ಅಪರಾಧ ತಡೆಗಟ್ಟಲು ಕಮ್ಯೂನಿಟಿ ಪೊಲೀಸಿಂಗ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ.<br>➢ ಅಪರಾಧಗಳ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಕರಪತ್ರಗಳನ್ನು ಪ್ರಕಟಿಸಿ ವಿತರಿಸಲಾಗುತ್ತಿದೆ.<br>➢ ನೊಂದ ವ್ಯಕ್ತಿಗಳು ದೂರವಾಣಿ ಮೂಲಕ ನಿಸ್ತಂತು ಕೇಂದ್ರಕ್ಕೆ ಮಾಹಿತಿ ನೀಡುವ ಸಲುವಾಗಿ ಡಯಲ್-100 ದೂರವಾಣಿ ಸಂಪರ್ಕ, ಮಹಿಳೆಯರು ಮತ್ತು ಮಕ್ಕಳ ಸಹಾಯವಾಣಿ ಕೇಂದ್ರಗಳಾಗಿ ದೂರವಾಣಿ ನಂಬರ್-1092 ಹಾಗೂ 1098 ಚಾಲನೆಯಲ್ಲಿರುತ್ತದೆ.<br>➢ ಅಪರಾಧ ಕೃತ್ಯಗಳಲ್ಲಿ ತೊಡಗಿರುವ ಜನರ ವಿರುದ್ಧ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಅಪರಾಧಿಗಳ ಮೇಲೆ ಎಮ್‌ಓಬಿ ಹಾಗೂ ರೌಡಿ ಶೀಟ್ ತೆಗೆಯಲಾಗುತ್ತಿದೆ ಹಾಗೂ ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ ಗಡಿಪಾರು ಮಾಡಲಾಗುತ್ತಿದೆ.<br>➢ ದಿನದ 24 ಗಂಟೆ ಅಧಿಕಾರಿ ಸಿಬ್ಬಂದಿಯವರು ಗಸ್ತು ಕರ್ತವ್ಯವನ್ನು ಸರದಿ ಪ್ರಕಾರ ನಿರ್ವಹಣೆ ಮಾಡಲಾಗುತ್ತಿದೆ. ಆ ಮೂಲಕ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸುವ ದರೋಡೆ ಸುಲಿಗೆ ಪ್ರಕರಣಗಳನ್ನು ಗಣನೀಯ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗಿರುತ್ತದೆ. ಅಲ್ಲದೇ ಸದರಿ ರಸ್ತೆಗಳಲ್ಲಿ ರಸ್ತೆ ಅಪಘಾತಗಳು ಸಂಭವಿಸಿದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ ಗಾಯಾಳುಗಳನ್ನು ಚಿಕಿತ್ಸೆಗೆ ಸಾಗಿಸಲು ಸಹಾಯಕವಾಗಿರುತ್ತದೆ.<br>➢ ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಬ್ಯಾಂಕ್/ಎಟಿಎಂ/ಅಂಚೆ ಕಛೇರಿಗಳಲ್ಲಿ ಅಲಾರಂ ಸಿಸ್ಟಂ ಅಳವಡಿಸಿ ಹಾಗೂ ಕಡ್ಡಾಯವಾಗಿ ಸೆಕ್ಯೂರಿಟಿ ಗಾರ್ಡ್ ನೇಮಕ ಮಾಡಿಕೊಳ್ಳುವ ಬಗ್ಗೆ ಸಂಬಂಧಪಟ್ಟವರಿಗೆ ಪೊಲೀಸ್ ನೋಟೀಸ್ ನೀಡಿ ಸೂಕ್ತ |

| | | |
|---|---|---|
| | | ತಿಳುವಳಿಕೆ ನೀಡಲಾಗಿರುತ್ತದೆ.<br>➢ ದೇವಸ್ಥಾನ/ಮಸೀದಿ/ಚರ್ಚ್/ಬ್ಯಾಂಕ್/ಎಟಿಎಂ/ಜ್ಯೂಯಲರಿ ಶಾಪ್ ಮತ್ತು ಸೈಬರ್ ಸೆಂಟರ್‌ಗಳಲ್ಲಿ ಕಡ್ಡಾಯವಾಗಿ ಸಿ.ಸಿ.ಕ್ಯಾಮೆರಾ ಅಳವಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟವರಿಗೆ ನೋಟೀಸ್ ಕೂಡ ಜಾರಿ ಮಾಡಲಾಗಿರುತ್ತದೆ. ಸಂಬಂಧಪಟ್ಟ ಮಾಲೀಕರುಗಳಿಗೆ Burglary Alarm ಅಳವಡಿಸುವಂತೆ ಸೂಕ್ತ ತಿಳುವಳಿಕೆ ನೀಡಲಾಗಿರುತ್ತದೆ.<br>➢ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್, ಇನ್ಸ್ಟಾಗ್ರಾಂ, ಪೊಲೀಸ್ ವೆಬ್‌ಸೈಟ್‌ಗಳನ್ನು ಬಳಸಿ ಸಾರ್ವಜನಿಕರಿಗೆ ಅಪರಾಧ ಕೃತ್ಯಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>➢ ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಯ ಮಾಲೀಕರುಗಳು ತಮ್ಮ ಮನೆಯನ್ನು ಬಾಡಿಗೆಗೆ ಕೊಡುವಾಗ ಬಾಡಿಗೆದಾರರ ಪೂರ್ವಾಪರಗಳನ್ನು ವಿಚಾರ ಮಾಡಿ ನೈಜ ದಾಖಲಾತಿಗಳೊಂದಿಗೆ ಮನೆ ಬಾಡಿಗೆಗೆ ಕೊಡುವುದು ಹಾಗೂ ಬಾಡಿಗೆದಾರರ ಮನೆಗೆ ಬಂದು-ಹೋಗುವವರ ಮೇಲೆ ನಿಗಾ ಇಡಲು ನಾಗರೀಕ ಸದಸ್ಯರ ಸಭೆಯಲ್ಲಿ ಕೋರಲಾಗಿರುತ್ತದೆ.<br>➢ ಪೊಲೀಸ್ ಠಾಣಾ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಸಾರ್ವಜನಿಕರ ಸಂಪರ್ಕವನ್ನು ಹೊಂದಿ ಪ್ರತಿಯೊಂದು ಆಗು ಹೋಗುಗಳ ಮೇಲೆ ನಿಗಾವಹಿಸಿ ಅಪರಾಧ ತಡೆಗಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಯಾರಾದರೂ ಸಮಾಜಘಾತುಕ ವ್ಯಕ್ತಿಗಳ ಜೊತೆ ಸೇರಿ ಅಪರಾಧ ಕೃತ್ಯಗಳನ್ನು ಮಾಡುವ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ಅಂತಹವರನ್ನು ಕೂಡಲೇ ಪತ್ತೆ ಹಚ್ಚಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತದೆ. |
| ಆ | ರಾಜ್ಯದಲ್ಲಿ NIA ಕಛೇರಿ/ ಘಟಕವನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸದರಿ ಕಛೇರಿ/ ಘಟಕವನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮದ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು; | ಕರ್ನಾಟಕ ರಾಜ್ಯ ವ್ಯಾಪ್ತಿಯನ್ನೊಳಗೊಂಡಂತೆ ಬೆಂಗಳೂರು ನಗರದಲ್ಲಿ ಈಗಾಗಲೇ NIA ಪೊಲೀಸ್ ಠಾಣೆಯನ್ನು ಸ್ಥಾಪಿಸಲಾಗಿದ್ದು, ದಿನಾಂಕ: 18.05.2022 ರಿಂದ ಕಾರ್ಯನಿರ್ವಹಿಸುತ್ತಿದೆ. |
| ಇ | ರಾಜ್ಯದ ಯಾವ ಯಾವ ನಗರ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ NIA ಕಛೇರಿ/ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ? (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು) | ಕರ್ನಾಟಕ ರಾಜ್ಯದ ಇತರೆ ನಗರ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ NIA ಕಛೇರಿ/ ಘಟಕಗಳನ್ನು ಸ್ಥಾಪಿಸುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: 58 ಎಸ್ ಎಸ್ ಟಿ 2023

(ಆರಗ ಜ್ಞಾನೇಂದ್ರ)
ಗೃಹ ಸಚಿವರು